ಸಿಎಸ್ಪಿ 90:96-97.

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಹಾಸನ ಜಿಲ್ಲೆ,
ಹಾಸನ, ದಿನಾಂಕ:27-06-1996.

## -: ಸುತ್ತೋಲೆ :-

ವಿಷಯ:- ಅನುಮೋದಿಸಲ್ಪಟ್ಟ ಚಿತ್ರಗಳನ್ನು ಪ್ರದರ್ಶಿಸುವ ಕುರಿತು.

ಉಲ್ಲೇಖ:- ಭಾರತ ಸರ್ಕಾರದ ಫಿಲಂ ಡಿವಿಜನ್‌ನ ಪತ್ರ ಸಂಖ್ಯೆ:ಡಿ.ಎಂ:ಹೆಚ್ಎಸ್:96-97, ದಿನಾಂಕ:06-06-96.

oooooo

ಸಿನಿಮಾ ಆಟೋಗ್ರಾಫಿ ನಿಯಮಾವಳಿಗಳ ಪ್ರಕಾರ ಪ್ರತಿಯೊಂದು ಚಿತ್ರ ಮಂದಿರದವರು ಚಿತ್ರ ಪ್ರದರ್ಶನಕ್ಕೆ ಮುಂಚಿತವಾಗಿ ಅನುಮೋದಿಸಲ್ಪಟ್ಟ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕಾಗಿರುತ್ತದೆ. ಕೆಲವು ಚಿತ್ರ ಮಂದಿರಗಳಲ್ಲಿ ಈ ಚಿತ್ರಗಳನ್ನು ಪ್ರದರ್ಶಿಸಲ್ಪಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದು ಪರವಾನಗಿಯ ಷರತ್ತನ್ನು ಉಲ್ಲಂಘಿಸಿದಂತಾಗುತ್ತದೆ. ಈ ಕೃತ್ಯ ದೆಹಲಿ ಹೈಕೋರ್ಟಿನ ಆದೇಶ ದಿನಾಂಕ:31-08-1995ರ ನಂತರ ಹೆಚ್ಚಾಗಿರುತ್ತದೆ. ಇದಕ್ಕೆ ಕಾರಣ ನ್ಯಾಯಾಲಯದ ಆದೇಶವನ್ನು ತಪ್ಪಾಗಿ ಅರ್ಥೈಸಿಕೊಂಡಿರುವುದರಿಂದಾಗಿದೆ. ನ್ಯಾಯಾಲಯ ಆದೇಶ ಇಂತಿದೆ.

(1) ಅನುಮೋದಿಸಲ್ಪಟ್ಟ ಚಿತ್ರಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರದರ್ಶಿಸಲ್ಪಡುವುದನ್ನು ರಾಜ್ಯ ಸರ್ಕಾರವು ಕಡ್ಡಾಯಗೊಳಿಸಬಹುದಾಗಿದೆ.

(2) ಇಂತಹ ಚಿತ್ರಗಳನ್ನು ಫಿಲಂ ಡಿವಿಜನ್‌ನವರು ಸರಬರಾಜು ಮಾಡುವುದು.

(3) ಸಿನಿಮಾ ಮಾಲೀಕರನ್ನು ಈ ಫಿಲಂಗಳನ್ನು ಸರಬರಾಜು ಮಾಡಿದ ಬಗ್ಗೆ ರೆಂಟಲ್ ಚಾರ್ಜನ್ನು ವಸೂಲಿ ಮಾಡುವಂತಿಲ್ಲ.

ಕ್ರಮಾಂಕ 3 ರ ವಿರುದ್ಧ ಫಿಲಂ ಡಿವಿಜನ್‌ನವರು ಭಾರತದ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದು, ದೆಹಲಿ ನ್ಯಾಯಾಲಯದ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತಾರೆ. ಈ ಪ್ರಕರಣ ಹಾಲಿ ತೀರ್ಮಾನಕ್ಕೆ ಬಾಕಿ ಇರುತ್ತದೆ.

ಆದುದರಿಂದ ತಮ್ಮ ಚಿತ್ರ ಮಂದಿರಗಳಲ್ಲಿ ತಪ್ಪದೇ '' ಅನುಮೋದಿತ ಚಿತ್ರ '' ಗಳನ್ನು ಕಡ್ಡಾಯವಾಗಿ ಪ್ರದರ್ಶಿಸಲು ಕೋರಿದೆ.

ಅಪರ ಜಿಲ್ಲಾ ದಂಡಾಧಿಕಾರಿಗಳು,
ಹಾಸನ ಜಿಲ್ಲೆ, ಹಾಸನ.

ಎಲ್ಲಾ ಚಿತ್ರ ಮಂದಿರದ ಮಾಲೀಕರಿಗೆ.
ಆರಕ್ಷಕ ಅಧೀಕ್ಷಕರು, ಹಾಸನ ಹಾಗೂ ಎಲ್ಲಾ ತಹಸೀಲ್ದಾರರವರಿಗೆ ಅಗತ್ಯ ಕ್ರಮಕ್ಕಾಗಿ.

MAG 47/96